<u>ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ, ನ್ಯಾಯಾಲಯ,</u>
<u>ಶಿಗ್ಗಾಂವ.</u>

**ಸಿಸಿ. ನಂ.190/2019**

<u>ದೂರುದಾರರುಃ</u>

ಕರ್ನಾಟಕ ರಾಜ್ಯ , ತಡಸ ಪೋಲಿಸ್ ಠಾಣೆ, ತಡಸ

ವಿರುದ್ಧ

<u>ಆರೋಪಿತರು:</u>

ಸತ್ಯನಾರಾಯಣ ಗ್ರಹಣ ಶರ್ಮಾ,
ವಯಾಃ 35 ವರ್ಷ,ಉಃ ಚಾಲಕ,
ಸಾಃ ಪುರಾಣ, ತಾಃ ಕಲಮಾನುರಿ, ಜಿಃ ಹಿಂಗೊಳಿ.

<u>ಆಪಾದನೆಯ ಸಾರಾಂಶ</u>

ದಿನಾಂಕಃ 21.05.2015 ರಂದು ರಾತ್ರಿ 09.45 ಗಂಟೆಯ ಸುಮಾರಿಗೆ ತಡಸ ಪೋಲೀಸ್ ಠಾಣೆ ಹದ್ದಿಯಲ್ಲಿ ಆರೋಪಿಯಾದ ನೀವು ಚಲಾಯಿಸುತ್ತಿದ್ದ ಲಾರಿ ಸಂಖ್ಯೆಃ ಎಮ್ ಹೆಚ್-09/ಸಿಎ-1836 ನೇದ್ದನ್ನು ಹುಬ್ಬಳ್ಳಿಯಿಂದ ಹಾವೇರಿ ಕಡೆಗೆ ಬರುವ ಪಿ.ಬಿ. ರಸ್ತೆಯಲ್ಲಿ ಮಡ್ಲಿ ಕ್ರಾಸ್ ಹತ್ತಿರ ಅತೀ ವೇಗ ಹಾಗೂ ನಿಷ್ಕಾಳಜಿತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು, ಅಪಘಾತ ಮಾಡಿದ ಅಪರಾಧಕ್ಕಾಗಿ ಭಾ.ದಂ.ಸಂಹಿತೆ ಕಾಯ್ದೆ ಕಲಂ.279 ರ ರೀತ್ಯ ದಂಡನೀಯವಾದ ಅಪರಾಧ ವೆಸಗಿರುವುದಾಗಿ ಆಪಾದನೆ ಇದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ವಾಹನವನ್ನು ಅತೀಜೋರಾಗಿ ಚಲಾಯಿಸಿಕೊಂಡು ಬಂದು, ಹಿಂದಿನ ವಾಹನಕ್ಕೆ ಯಾವುದೇ ಸೂಚನೆ ನೀಡದೇ, ಇಂಡಿಕೇಟರ್ ಲೈಟ್ ಹಾಕದೆ ಮಡ್ಲಿ ಕ್ರಾಸ್ ನಲ್ಲಿ ನಿಮ್ಮ ಲಾರಿಯನ್ನು ತಿರುಗಿಸಿಕೊಂಡು ಶಿಗ್ಗಾಂವದಿಂದ ಹುಬ್ಬಳ್ಳಿ ಕಡೆಗೆ ಹೋಗುವ ರಸ್ತೆಯಲ್ಲಿ ನಿರ್ಲಕ್ಷತನದಿಂದ ಒಮ್ಮಲೇ ತಿರುಗಿಸಿಕೊಂಡಿದ್ದರಿಂದ ಹಿಂದುಗಡೆಯಿಂದ ಬಂದ ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆಃ ಕೆಎ-27/ಎಫ್-535 ನೇದ್ದಕ್ಕೆ

ಡಿಕ್ಕಿ ಹೊಡೆದು ಅಪಘಾತಪಡಿಸಿದ್ದರಿಂದ ಬಸ್ಸಿನಲ್ಲಿದ್ದ ಪಿರ್ಯಾದಿ ಹಾಗೂ ಸುಮಾರು 17 ರಿಂದ 18 ಜನ ಪ್ರಯಾಣಿಕರಿಗೆ ಸಾದಾಗಾಯ ಪಡಿಸಿದ ಅಪರಾಧಕ್ಕಾಗಿ ಭಾ.ದಂ.ಸಂಹಿತೆ ಕಾಯ್ದೆ ಕಲಂಃ337 ರೀತ್ಯ ದಂಡನೀಯವಾದ ಅಪರಾಧ ವೆಸಗಿರುವುದಾಗಿ ಆಪಾದನೆ ಇದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ವಾಹನವನ್ನು ಅತೀಜೋರಾಗಿ ಚಲಾಯಿಸಿಕೊಂಡು ಬಂದು ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆಃ ಕೆಎ-27/ಎಫ್-535 ನೇದ್ದಕ್ಕೆ ಡಿಕ್ಕಿ ಹೊಡೆದು ಅಪಘಾತಪಡಿಸಿ ಬಸ್ಸಿನಲ್ಲಿದ್ದ ಪಿರ್ಯಾದಿ ಹಾಗೂ ಸುಮಾರು 17 ರಿಂದ 18 ಜನ ಪ್ರಯಾಣಿಕರಿಗೆ ಭಾರಿ ತೀವ್ರಗಾಯ ಪಡಿಸಿದ್ದು, ಭಾ.ದಂ.ಸಂಹಿತೆ ಕಾಯ್ದೆ ಕಲಂಃ338 ರೀತ್ಯ ದಂಡನೀಯವಾದ ಅಪರಾಧ ವೆಸಗಿರುವುದಾಗಿ ಆಪಾದನೆ ಇದೆ.

ನಾಲ್ಕನೇಯದಾಗಿ, ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ವಿವರಿಸಿದ ವಾಹನವನ್ನು ಅತಿ ವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅಪಘಾತಪಡಿಸಿದ ಪರಿಣಾಮ, ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕನಾದ ದೇವಸಿಂಗ್ ನಾಯ್ಕ ತಂದೆ ಹೇಮಾ ನಾಯ್ಕ ಇವರಿಗೆ ಗಾಯ ಪಡಿಸಿದ್ದರಿಂದ ವೈದ್ಯಕೀಯ ಉಪಚಾರಕ್ಕೆ ಸುಚರಾಯ ಹುಬ್ಬಳ್ಳಿ ಆಸ್ಪತ್ರೆಯಲ್ಲಿ ದಾಖಲಾದ ಕಾಲಕ್ಕೆ, ವೈದ್ಯಕೀಯ ಉಪಚಾರ ಫಲಿಸದೇ ದಿನಾಂಕ 27.06.2018 ರಂದು ಮಧ್ಯಾಹ್ನ 12.15 ಗಂಟೆಗೆ ಮರಣ ಹೊಂದುವಂತೆ ಮಾಡಿದ್ದು, ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ.304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿರುತ್ತದೆ.

ಕೊನೆಯದಾಗಿ, ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ವಿವರಿಸಿದ ವಾಹನವನ್ನು ಮೇಲೆ ವಿವರಿಸಿದಂತೆ ಚಲಾಯಿಸಿ ಮೇಲೆ ವಿವರಿಸಿದಂತೆ ಅಪಘಾತ ಪಡಿಸಿ ಗಾಯಾಳುವನ್ನು ಆಸ್ಪತ್ರೆಗೆ ಸೇರಿಸದೆ ಅಪಘಾತದ ವಿಷಯವನ್ನು ಹತ್ತಿರದ ಠಾಣೆಗೆ ತಿಳಿಸದೇ ಪರಾರಿಯಾಗಿದ್ದು, ಆ ಕಾರಣ ಆರೋಪಿಯಾದ

ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 134 ಸಹಕಲಂ 187 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿರುತ್ತದೆ.

ಪ್ರಶ್ನೆ1: ಮೇಲಿನ ಅಪರಾಧದ ಬಗೆಗಿನ ವಿವರಣೆ ಕನ್ನಡದಲ್ಲಿ ಓದಿ ಹೇಳಿದ್ದು ನಿಮಗೆ ಅರ್ಥವಾಯಿತಾ?

ಉತ್ತರಃ ಆರೋಪಿಃ

ಪ್ರಶ್ನೆ2: ಸದರೀ ಅಪರಾಧವನ್ನು ನೀವು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೇ?

ಉತ್ತರಃ ಆರೋಪಿಃ

(ಈ ಮೇಲಿನ ಆಪಾದನೆ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿ ಹೇಳಿ ಅವರು ನೀಡಿದ ಉತ್ತರಗಳನ್ನು ಯಥಾ ಪ್ರಕಾರವಾಗಿ ದಾಖಲಿಸಿಕೊಂಡಿದ್ದು ಸದರಿ ದಾಖಲಾತಿಯು ನಿಜವಾದುದು ಹಾಗೂ ಸರಿಯಾದುದು ಎಂದು ದೃಢೀಕರಿಸುತ್ತೇನೆ)

ದಿನಾಂಕ: 20.09.2024

**(ಅಶ್ವಿನಿಚಂದ್ರಕಾಂತ್)**
ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಂಎಫ್.ಸಿ. ನ್ಯಾಯಾಲಯ, ಶಿಗ್ಗಾಂವ.